**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 192/2024

ಪಿಡಬ್ಲು :1 ಸಿಡಬ್ಲು :1

ಸಾಕ್ಷಿಯ ಹೆಸರು : ಶ್ರೀ.ಮಲ್ಲಪ್ಪ ಮಾಳಿ

ತಂದೆಯ ಹೆಸರು : ಶ್ರೀ ಜ್ಞಾನದೇವ ಮಾಳಿ

ವಯಸ್ಸು : 32 ವರ್ಷ

ಉದ್ಯೋಗ : ವ್ಯವಸಾಯ

ವಾಸ್ತವ್ಯ : ಸುಟ್ಟಟ್ಟಿ

ದಿನಾಂಕ : 21-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದೆ ವಿಚಾರೆಣೆಗೆ ಹಾಜರಾಗಿರುವ ಎಲ್ಲಾ ಆರೋಪಿತರು ನನಗೆ ಪರಿಚಯ ಇರುತ್ತಾರೆ. ಚಾಸಾಃ 4 ಜ್ಞಾನದೇವ ನನ್ನ ತಂದೆ. ಚಾಸಾಃ 5 ಸುರೇಶ ಮಾಳಿ ನನ್ನ ಚಿಕ್ಕಪ್ಪನ ಮಗ. ಚಾಸಾಃ 6 ರಾಜು ನನ್ನ ಮಾವ. ಚಾಸಾಃ 7 ಬಸಪ್ಪ, ಚಾಸಾಃ 8 ಅಪ್ಪಾಸಾಬ ನನ್ನ ಚಿಕ್ಕಪ್ಪಂದಿರು. ಚಾಸಾಃ 9 ಮಹೇಶ ನನ್ನ ತಂಗಿಯ ಗಂಡ. ಚಾಸಾಃ 10 ನನ್ನ ತಂಗಿ.

2. ದಿನಾಂಕಃ 14-09-2022 ರಂದು ಚಾಸಾಃ 9 ನನ್ನ ಬಾವ ಮಹೇಶ ನನಗೆ ಪೋನ ಮಾಡಿ ಸುರೇಶ ಗಾಡಿವಡ್ಡರ ಎನ್ನುವವರು ನನ್ನ ತಂಗಿ ರಾಜಶ್ರೀ ಇವರಿಗೆ ಪೋನ ಮಾಡಿ ಕಾಡಿಸುತ್ತಿದ್ದಾನೆ ಅವನಿಗೆ ತಾಕಿತು ಮಾಡು ಎಂದು ನನಗೆ ಹೇಳಿದರು. ನಾನು ಮತ್ತು ಚಾಸಾಃ 5 ಸುರೇಶ ವಿಠ್ಠಲ ಮಾಳಿ ಇವರು ಸುರೇಶ ಗಾಡಿವಡ್ಡರ ಇವರನ್ನು ನಮ್ಮ ತೋಟಕ್ಕೆ ಕರೆದುಕೊಂಡು ಹೋದೆವು. ಅದೇ ಸ್ಥಳಕ್ಕೆ ನಮ್ಮ ಚಿಕ್ಕಪ್ಪಂದಿರಾದ ಚಾಸಾಃ 7 ಬಸಪ್ಪ,

ಚಾಸಾಃ 8 ಅಪ್ಪಾಸಾಬ ಅವರನ್ನು ಕರೆಸಿದ್ದೇವು. ನಾವು ಸುರೇಶ ಗಾಡಿವಡ್ಡರ ಇವರಿಗೆ ನಮ್ಮ ತಂಗಿಗೆ ಯಾವ ಕಾರಣಕ್ಕೆ ಪೋನ ಮಾಡಿ ಕಾಡಿಸುತ್ತಿದ್ದಿಯಾ, ಆ ರೀತಿ ಕಾಡಿಸಬೇಡ ಎಂದು ಹೇಳುವಷ್ಟರಲ್ಲಿ ನಮ್ಮ ಮನೆಯ ಹತ್ತಿರ ಚಿರಾಡುವ ಶಬ್ದ ಕೇಳಿಸಿತು, ಅದಕ್ಕೆ ಸುರೇಶ ಗಾಡಿವಡ್ಡರ ಅವರನ್ನು ಅಲ್ಲಿಯೇ ಬಿಟ್ಟು ನಾನು ಮತ್ತು ಚಾಸಾಃ 5 ಸುರೇಶ ನಮ್ಮ ಮನೆ ಬಳಿ ಬಂದೇವು, ಆ ಸಮಯದಲ್ಲಿ ಆರೋಪಿತರೆಲ್ಲರೂ ಸೇರಿ ನಮ್ಮ ತಂದೆಯನ್ನು ಅವಾಚ್ಯ ಶಬ್ದದಿಂದ ಬೈಯುತ್ತಿದ್ದರು, ನಮ್ಮ ಸುರೇಶನನ್ನು ಎಲ್ಲಿ ಬಚ್ಚಿಟ್ಟಿದ್ದೀರಿ ಕರೆದುಕೊಂಡು ಬನ್ನಿ ನಿಮ್ಮನ್ನು ಬಿಡುವುದಿಲ್ಲ ಕಡಿದು ಹಾಕುತ್ತೇವೆ ಎಂದು ಬೈಯುತ್ತಿದ್ದರು. ನಮ್ಮ ತಂದೆಗೆ ಬಿದಿರು ಬಡಿಗೆಯಿಂದ 1ನೇ ಆರೋಪಿ ಸುನೀಲ ಗಾಡಿವಡ್ಡರ ತಲೆಗೆ ಹೊಡೆದನು, 2ನೇ ಆರೋಪಿ ರಾಜು ಮತ್ತು 5ನೇ ಆರೋಪಿ ಅಜಿತ ಅವರು ಕೈಯಿಂದ ನಮ್ಮ ತಂದೆಗೆ ಹೊಡೆದರು. ನಮ್ಮ ತಂದೆಯನ್ನು ಬಿಡಿಸಲು ಹೋದಾಗ 7ನೇ ಆರೋಪಿ ಈರಪ್ಪ, 4ನೇ ಆರೋಪಿ ಸಾಬು ಗಾಡಿವಡ್ಡರ, 6ನೇ ಆರೋಪಿ ವಿಠ್ಠಲ ಗಾಡಿವಾಡ್ಡರ, 3ನೇ ಆರೋಪಿ ಅಶೋಕ ಗಾಡಿವಡ್ಡರ ಕೈಯಿಂದ ಎಡಕಾಲಿನ ಮೇಲೆ ಹೊಡೆಬಡೆ ಮಾಡಿದರು. ಎಲ್ಲಾ ಆರೋಪಿತರು ಸೇರಿ ನನ್ನ ಚಿಕ್ಕಪ್ಪನ ಮಗ ಸುರೇಶ ಮಾಳಿ ಇವನಿಗೆ ಕೈಯಿಂದ ಹೊಡೆಬಡೆ ಮಾಡಿದರು. ಆ ಸಮಯದಲ್ಲಿ ಊರಿನ ಜನರು ಬಂದು ಬಿಡಿಸಿದರು.

3. ನಾವು ನಮ್ಮ ತಂದೆಯನ್ನು ಅಂಬ್ಯುಲೆನ್ಸನಲ್ಲಿ ಅಥಣಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಚಾಸಾಃ 6 ರಾಜು ಅವರು ನನ್ನ ತಂದೆಯೊಂದಿಗೆ ಆಸ್ಪತ್ರೆಗೆ ಹೋದರು. ನಂತರ ನನ್ನ ತಂದೆಯನ್ನು ಖಾಸಗಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ನಂತರ ನಾವು ತಡಮಾಡಿ ಪೋಲಿಸರಿಗೆ ದೂರು ನೀಡಿದೇವು. ನಮ್ಮ ತಂದೆಗೆ ಆರಾಮ ತಪ್ಪಿದ್ದರಿಂದ ತಡವಾಗಿ ದೂರು ನೀಡಿದೇವು.

4. ದೂರನ್ನು ನಿಪಿ–1 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–1 [ಎ] ಎಂದು ಗುರುತಿಸಲಾಯಿತು. 1ನೇ ಆರೋಪಿ ನಮ್ಮ ತಂದೆಗೆ ಹೊಡೆದನು ಎಂದು ಹೇಳಲಾದ ಬಡಿಗೆಯನ್ನು ನೋಡಿದರೆ ಗುರುತಿಸುತ್ತೇನೆ.

5. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಮನವಿಯನ್ನು ಮಾಡಿದ್ದಾರೆ. ಮನವಿಯನ್ನು ಪರಿಗಣಿಸಲಾಯಿತು. ನ್ಯಾಯಾಲಯದಲ್ಲಿ ಹಾಜರುಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ ಒಂದು ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಬಿದಿರಿನ ಬಡಿಗೆಯನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು:ಆರೋಪಿತರ ಪರ ಶ್ರೀ.ಎಸ್.ಟಿ.ಕೆ ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.